ಅಪರ ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯ, ದೇವನಹಳ್ಳಿ
**ಸಿ.ಸಿ.ನಂ. 3679/2018**

ಪಿಡಬ್ಲೂಃ 8 ಸಿಡಬ್ಲೂ ಃ 4
ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.
ದಿನಾಂಕಃ 10-02-2026

ಹೆಸರು ಃ ದಾಮೋದರ
ತಂದೆ ಹೆಸರು ಃ ವೆಂಕಟರಮಣಪ್ಪ
ವಯಸ್ಸು ಃ 27
ಉದ್ಯೋಗ ಃ ಕೋಳಿ ಫಾರಂ
ವಾಸ ಃ ಆಂಧ್ರ ಪ್ರದೇಶ

ಮುಖ್ಯ ವಿಚಾರಣೆ ಃ ಎಪಿಪಿಯವರಿಂದಃ

ಮೃತ ಮೋಹನ್ ಯಾರೆಂದು ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿ ಯಾರೆಂದು ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಏನೂ ಗೊತ್ತಿಲ್ಲ. ನಾನು ಯಾವುದೇ ಅಪಘಾತ ನೋಡಿಲ್ಲ. ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ನನಗೆ ಯಾವುದೇ ಅಪಘಾತದಿಂದ ಪೆಟ್ಟುಗಳಾಗಿಲ್ಲ. ಸಾಕ್ಷಿ ನಿಪಿ-7 ಛಾಯಾ ಚಿತ್ರವನ್ನು ನೋಡಿ ಅದರಲ್ಲಿರುವ ವಾಹನವನ್ನು ಗುರುತಿಸಿರುವುದಿಲ್ಲ.

(ಈ ಹಂತದಲ್ಲಿ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಬೇಕೆಂದು ಕೋರಿದ್ದು ಸಾಕ್ಷಿಯು ಅಭಿಯೋಜನಾ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುವ ಕಾರಣ ಮಾನ್ಯ ಎಪಿಪಿರವರ ಕೋರಿಕೆಯನ್ನು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ

1. ದಿನಾಂಕ 18-04-2018 ರಂದು ನಾನು ಮತ್ತು ನನ್ನ ಸ್ನೇಹಿತ, ಆರೋಪಿ ಮನೋಜ್ ಬೂದಿಗೆರೆ ಗ್ರಾಮದಿಂದ ವಿಜಯಪುರಕ್ಕೆ ಹೋಗಿ ವಾಪಸ್ ಮೋಟಾರ್

ಸೈಕಲ್ ನಂ. ಕೆಎ 43 ಇ 2386 ನಲ್ಲಿ ಸಂಜೆ 4.20 ಗಂಟೆ ಸಮಯದಲ್ಲಿ ಚನ್ನರಾಯಪಟ್ಟಣ ರಸ್ತೆಯ ನಾಗನಾಯಕನಹಳ್ಳಿ ರಸ್ತೆಯ ಬಸವೇಶ್ವರ ದೇವಸ್ಥಾನದ ಬಳಿ ಆರೋಪಿ ತನ್ನ ವಾಹನವನ್ನು ಅತಿವೇಗವಾಗಿ ಅಜಾಗರೂಕತೆಯಿಂದ ಚಲಿಸಿಕೊಂಡು ಹೋಗಿ ರಸ್ತೆಯ ಎಡಭಾಗದಲ್ಲಿ ನಿಂತಿದ್ದ ಮೋಟಾರ್ ಸೈಕಲ್ ಗೆ ಡಿಕ್ಕಿ ಪಡಿಸಿದ ಪರಿಣಾಮ ಎರಡು ಮೋಟಾರ್ ಸೈಕಲ್ ಜಖಂ ಗೊಂಡು ನನಗೆ ಸಣ್ಣ ಪುಟ್ಟ ತರಚಿದ ಗಾಯಗಳಾದವು ಎಂದರೆ ಸರಿಯಲ್ಲ. ಮೋಟಾರ್ ಸೈಕಲ್ ಮೇಲೆ ಕುಳಿತಿದ್ದ ವ್ಯಕ್ತಿಯ ತಲೆಗೆ ರಕ್ತ ಗಾಯ ಆಯಿತು, ಮೋಟಾರ್ ಸೈಕಲ್ ಪಕ್ಕದಲ್ಲಿ ನಿಂತಿದ್ದ ಒಬ್ಬ ವ್ಯಕ್ತಿಯ ಬಲಗಾಲಿಗೆ ತರಚಿದ ಗಾಯಗಳಾಯಿತು, ಮೋಟಾರ್ ಸೈಕಲ್ ನ್ನು ನೋಡಲಾಗಿ ಕೆಎ 05 ಇಡಬ್ಲ್ಯೂ 1727 ಆಗಿತ್ತು ಎಂದರೆ ಸರಿಯಲ್ಲ. ಸ್ಥಳೀಯರು ಗಾಯಾಳುಗಳನ್ನು ಆಂಬುಲೆನ್ಸ್ ನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ನನಗೆ ಮತ್ತು ಆರೋಪಿಗೆ ತರಚಿದ ಗಾಯಗಳಾಗಿದ್ದರಿಂದ ಯಾವುದೇ ಚಿಕಿತ್ಸೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

2. ದಿನಾಂಕ 25-04-2018 ರಂದು ಮಧ್ಯಾಹ್ನ 2.00 ಗಂಟೆ ಸಮಯದಲ್ಲಿ ಮೋಟಾರ್ ಸೈಕಲ್ ಮೇಲೆ ಕುಳಿತಿದ್ದ ಮೋಹನ್‌ರವರಿಗೆ ತೀವ್ರತರವಾದ ಪೆಟ್ಟುಗಳಾಗಿದ್ದು, ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟರು ಎಂಬ ವಿಚಾರ ತಿಳಿಯಿತು ಎಂದರೆ ಸರಿಯಲ್ಲ. ದಿ. 27-04-2018 ರಂದು ಈಗ ನನಗೆ ಓದಿ ಹೇಳಿದಂತೆ "ನಾನು ----- ಕೋರುತ್ತೇನೆ" ಎಂದು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು ನಿಪಿ-8 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ತಿಳಿದುಕೊಂಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಇಲ್ಲ ಎಂದು ನುಡಿದಿರುತ್ತಾರೆ.

ಮರುವಿಚಾರಣೆ ಇಲ್ಲ.

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಎ. ಒಪ್ಪಲಾಗಿದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ದೇವನಹಳ್ಳಿ